ಪ್ರಜಾವಾಣಿ

'ವಿಶ್ವ ಆತ್ಮಹತ್ಯಾ ತಡೆ' ದಿನಾಚರಣೆಯಲ್ಲಿ ಪ್ರೊ.ಎಚ್. ಚಂದ್ರಶೇಖರ್ ಕಳವಳ

# 'ವಿಕ್ಟೋರಿಯಾದಲ್ಲಿ ನಿತ್ಯ 50 ಆತ್ಮಹತ್ಯೆ ಪ್ರಕರಣ'

**ಪ್ರಜಾವಾಣಿ ವಾರ್ತೆ**

ಬೆಂಗಳೂರು: 'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಿನವೊಂದಕ್ಕೆ 40 ರಿಂದ 50 ರವರೆಗೂ ಆತ್ಮಹತ್ಯೆ ಪ್ರಯತ್ನದ ಪ್ರಕರಣಗಳು ದಾಖಲಾಗುತ್ತಿವೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಎಚ್. ಚಂದ್ರಶೇಖರ್ ಕಳವಳ ವ್ಯಕ್ತಪಡಿಸಿದರು.

ಮೆಡಿಕೋ ಪಾಸ್ಟೋಲ್ ಅಸೋಸಿಯೇಷನ್ ನಗರದಲ್ಲಿ ಸೋಮವಾರ ಆಯೋಜಿಸಿದ್ದ 'ವಿಶ್ವ ಆತ್ಮಹತ್ಯಾ ತಡೆ' ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಹೆಚ್ಚಿನ ಆತ್ಮಹತ್ಯಾ ಪ್ರಕರಣಗಳಲ್ಲಿ ಯುವ ಜನತೆಯೇ ತುತ್ತಾಗುತ್ತಿರುವುದು ಆತಂಕಕಾರಿಯಾಗಿದೆ. ಅವರಿಗಿರುವ ಅತಿಯಾದ ಒತ್ತಡ, ಪರೀಕ್ಷೆಯ ಬಗೆಗಿರುವ ಅತಿಯಾದ ಭಯ, ಮನೆಯವರ ಒತ್ತಡ ಹೀಗೆ ಇನ್ನು ಮುಂತಾದ ಕಾರಣಗಳಿಂದ ಇಂದಿನ ಯುವ ಜನತೆಯು ಆತ್ಮಹತ್ಯೆಗೆ ಅತಿ ಬೇಗ ಯಶಸ್ಸನ್ನು ಸಾಧಿಸಲು ಶರಣಾಗುತ್ತಿದ್ದಾರೆ. ಅಲ್ಲದೇ, ಅವರು ಬಯಸುತ್ತಾರೆ. ಅದು ಕೈಗೂಡದಿದ್ದಾಗ ಆತ್ಮಹತ್ಯೆಯ ಮೊರೆ ಹೋಗುತ್ತಾರೆ' ಎಂದು ವಿವರಿಸಿದರು.



ಮೆಡಿಕೋ ಪಾಸ್ಟೋಲ್ ಅಸೋಸಿಯೇಷನ್ ನಗರದಲ್ಲಿ ಸೋಮವಾರ ಆಯೋಜಿಸಿದ್ದ 'ವಿಶ್ವ ಆತ್ಮಹತ್ಯಾ ತಡೆ' ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಕಿರು ನಾಟಕವನ್ನು ಪ್ರದರ್ಶಿಸಿದರು -ಪ್ರಜಾವಾಣಿ ಚಿತ್ರ

ತಮ್ಮ ಎಲ್ಲ ಸಮಸ್ಯೆಗಳಿಗೆ ಆತ್ಮಹತ್ಯೆಯೇ ಪರಿಹಾರ ಎಂದು ನಂಬುತ್ತಾರೆ. ಆ ಸಮಯದಲ್ಲಿ ಅವರಿಗೆ ಒಂದು ವಿಶ್ವಾಸ ಪೂರ್ಣವಾದ ಮಾತು, ಸ್ನೇಹದಿಂದ ಅವರನ್ನು ಈ ಆತ್ಮಹತ್ಯೆಯ ದಾರಿಯಿಂದ ವಿಮುಖರನ್ನಾಗಿ ಮಾಡಬಹುದು' ಎಂದು ಅಭಿಪ್ರಾಯಪಟ್ಟರು.

'ಅತಿ ಸೂಕ್ಷ್ಮಮತಿಗಳಾದವರಿಗೆ ಬದುಕಿನ ಅತಿ ಚಿಕ್ಕ ಸೋಲು ಸಹಿಸಿಕೊಳ್ಳಲಾಗುವುದಿಲ್ಲ. ಅಂತಹವರಿಗೆ ಕುಟುಂಬ ಮತ್ತು ಸಮಾಜ ಆತ್ಮವಿಶ್ವಾಸ ಮತ್ತು ರಕ್ಷಣೆಯನ್ನು ಒದಗಿಸಬೇಕು' ಎಂದರು.

ವಿಶ್ವ ಆತ್ಮಹತ್ಯಾತಡೆ ದಿನಾಚರಣೆ ಅಂಗವಾಗಿ ವಿವಿಧ ಕಾಲೇಜು ವಿದ್ಯಾರ್ಥಿಗಳು ಕಿರು ನಾಟಕವನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ವೈದ್ಯ ಅಜಿತ್ ಭಿಡೆ ಮತ್ತಿತರರು ಉಪಸ್ಥಿತರಿದ್ದರು.